# ಕರ್ನಾಟಕ ಲೋಕಾಯುಕ್ತ

ಸಂ.ಕಂಪ್ಲೆಂಟ್/ಉಪಲೋಕ್/ಜಿಎಲ್‌ಬಿ/1082/2021
ಪಿಓ/ಎ.ಆರ್.ಇ-2 (ಮಂಡನಾಧಿಕಾರಿಗಳ ಶಾಖೆ)

ಬಹುಮಹಡಿಗಳ ಕಟ್ಟಡ,
ಡಾ॥ ಬಿ.ಆರ್.ಅಂಬೇಡ್ಕರ ರಸ್ತೆ,
ಬೆಂಗಳೂರು, ದಿನಾಂಕ:27/12/2021.
28

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(3)ರ ಅನ್ವಯ ವರದಿ

ವಿಷಯ: ಸರ್ಕಾರಿ ನೌಕರರಾದ **ಬಳ್ಳಾರಿ, ಜಿಲ್ಲೆ, ಹಗರಿಬೊಮ್ಮನಹಳ್ಳಿ ತಾಲ್ಲೂಕು, ಮಾರಬ್ಬಿಹಾಳ್ ಗ್ರಾಮ, ಗ್ರಾಮ ಲೆಕ್ಕಾಧಿಕಾರಿಗಳು, ಶ್ರೀ ಟಿ.ಜಿ.ಎಮ್. ಶಿವಕುಮಾರ, ಬಿನ್ ದಿ. ಎಂ. ಚನ್ನವೀರಯ್ಯ,** ರವರು ಕರ್ತವ್ಯ ಲೋಪ/ದುರ್ನಡತೆ ಎಸಗಿರುವ ಬಗ್ಗೆ.

1. ಮಾನ್ಯ ಪೋಲಿಸ್ ಅಧೀಕ್ಷಕರು ಭ್ರಷ್ಟಾಚಾರ ನಿಗ್ರಹ ದಳ, ಬಳ್ಳಾರಿ ವಲಯ, ಬಳ್ಳಾರಿ, ಇವರು ಪೋಲಿಸ್ ನಿರೀಕ್ಷಕರು, ಭ್ರಷ್ಟಾಚಾರ ನಿಗ್ರಹ ದಳ, ಬಳ್ಳಾರಿ, (ಇನ್ನು ಮುಂದೆ ತನಿಖಾಧಿಕಾರಿ ಎಂದು ಕರೆಯಲ್ಪಡುತ್ತಾರೆ), ಇವರ ತನಿಖಾ ವರದಿ ಮತ್ತು ಸಂಬಂಧಿಸಿದ ದಾಖಲೆಗಳೊಂದಿಗೆ ವರದಿಯನ್ನು ಸಲ್ಲಿಸಿದ್ದು, ಸದರಿ ವರದಿಯಲ್ಲಿ **ಶ್ರೀ. ಟಿ.ಜಿ.ಎಮ್. ಶಿವಕುಮಾರ, ಬಿನ್ ದಿ. ಎಂ. ಚನ್ನವೀರಯ್ಯ, ಗ್ರಾಮ ಲೆಕ್ಕಾಧಿಕಾರಿಗಳು, ಮರಬ್ಬಿಹಾಳ್ ಗ್ರಾಮ ಲೆಕ್ಕಾಧಿಕಾರಿಗಳ ಕಚೇರಿ, ತಾ: ಹಗರಿಬೊಮ್ಮನಹಳ್ಳಿ, ಜಿಲ್ಲೆ: ಬಳ್ಳಾರಿ,** (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ), ಆದ ನೀವು **ಶ್ರೀ ಬಿ. ಪಂಪಾಪತಿ, ಬಿನ್ ಬಿ. ಅಂಬಣ್ಣ, ಮನೆ ನಂ.30, ಸಾ:ಉಪ್ಪನಾಯಕನ ಹಳ್ಳಿ, ಹಗರಿಬೊಮ್ಮನಹಳ್ಳಿ ತಾ. ಜಿಲ್ಲಾ ಬಳ್ಳಾರಿ,** (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ರವರಿಂದ ಸರ್ಕಾರಿ ಕೆಲಸಕ್ಕೆ ಲಂಚದ ಹಣವನ್ನು ಪಡೆದು ಕರ್ತವ್ಯ ಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡು ಬಂದಿದ್ದರಿಂದ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 7(2) ರನ್ವಯ ಗೌರವಾನ್ವಿತ ಉಪಲೋಕಾಯುಕ್ತರು ಸ್ವಯಂ ಪ್ರೇರಿತ ದೂರು ದಾಖಲಿಸಿಕೊಂಡು ತನಿಖೆ ತೆಗೆದುಕೊಂಡಿರುತ್ತಾರೆ. ಬಳ್ಳಾರಿ, ಎ.ಸಿ.ಬಿ ಪೋಲಿಸ್ ಠಾಣೆ ಮೊಕದ್ದಮೆ ಸಂ: 04/2017 ರಲ್ಲಿಯ ದಾಖಲೆಗಳನ್ನು ಮತ್ತು ವಿವರಗಳನ್ನು ಪರಿಗಣಿಸಲಾಗಿ ಈ ಕೆಳಗೆ ಹೇಳಿದ ಸಂಗತಿಗಳು ಮೇಲ್ನೋಟಕ್ಕೆ ಕಂಡು ಬರುತ್ತದೆ.

i. ದೂರುದಾರರ ತಂದೆ ಬಿ.ಅಂಬಣ್ಣರವರು ಅಂಕಸಮುದ್ರ ಗ್ರಾಮದ ಸ.ನಂ. 63(ಜೆ) ರಲ್ಲಿ 2-ಎಕರೆ 98-ಸೆಂಟ್ಸ್ ಹಾಗೂ ಮರಬ್ಬಿಹಾಳ್ ಗ್ರಾಮದ ಸ.ನಂ.313(ಎಫ್)ರಲ್ಲಿ 2-ಎಕರೆ 01-ಸೆಂಟ್ಸ್ ಜಮೀನು, ಒಟ್ಟು 05-ಎಕರೆ 69-ಸೆಂಟ್ಸ್ ಜಮೀನನ್ನು ಅವರ ಮಕ್ಕಳಾದ 6-ಜನಕ್ಕೆ ವಿಭಾಗ ಮಾಡಿರುತ್ತಾರೆ. ಸದರಿ ವಿಭಾಗ ಪತ್ರಕ್ಕೆ ಸಂಬಂಧಿಸಿದಂತೆ ಹಗರಿಬೊಮ್ಮನಹಳ್ಳಿ ತಾ. ಉಪ-ನೊಂದಣಾಧಿಕಾರಿಗಳ ಕಚೇರಿಯಲ್ಲಿ ದಿ.15/03/2017ರಂದು ನೊಂದಣಿ ಮಾಡಿಸಿರುತ್ತಾರೆ. ಸದರಿ ವಿಭಾಗದ ಪತ್ರಕ್ಕೆ ಸಂಬಂಧಿಸಿದಂತೆ ಜಮೀನುಗಳ ಖಾತೆ ಬದಲಾವಣೆ ಕೆಲಸ ಹಗರಿಬೊಮ್ಮನಹಳ್ಳಿ ತಾಲ್ಲೂಕು ಕಚೇರಿಯಲ್ಲಿ ಆಗಬೇಕಿದ್ದು, ಇದಕ್ಕೆ ಸಂಬಂಧಿಸಿದಂತೆ ಫಾರಂ ನಂ.21ಕ್ಕೆ ದೂರುದಾರರ ತಂದೆ ಬಿ. ಅಂಬಣ್ಣ, ಅವರ ಮಕ್ಕಳಾದ ಐದೂ ಜನ ಸಹಿ ಮಾಡಿದ್ದು, ದೂರುದಾರರ ಅಣ್ಣನು ಮನೆಯಲ್ಲಿರದ ಕಾರಣ ಅವರ ಸಹಿ ಸದರಿ ಫಾರಂಗೆ

ಆಗಿರುವುದಿಲ್ಲ. ದಿ.15/04/2017ರಂದು ದೂರುದಾರರ ಅಣ್ಣನು ಎದುರುದಾರರು ಕೆಲಸ ಮಾಡುತ್ತಿರುವ ತಾಲ್ಲೂಕು ಕಚೇರಿಗೆ ಫಾರಂ ನಂ.21ಕ್ಕೆ ಸಹಿ ಮಾಡಲು ಬಂದಾಗ, ಎದುರುದಾರರು ದೂರುದಾರರ ಅಣ್ಣನಿಗೆ, ದೂರುದಾರರಿಂದ ಎದುರುದಾರರಿಗೆ ಫೋನ್ ಮಾಡುವಂತೆ ಹೇಳಿ ಕಳುಹಿಸಿದ್ದು, ಅದರಂತೆ ದೂರುದಾರರು ಅದೇ ದಿನ ಬೆಳಿಗ್ಗೆ 09-59 ಗಂಟೆಗೆ ಮತ್ತು 10-02 ಗಂಟೆಗೆ ಎದುರುದಾರರ ಮೊಬೈಲ್ ನಂ.9482053793ನೇದಕ್ಕೆ ತಮ್ಮ ಮೊಬೈಲ್ ನಂ.8105798592ರಿಂದ ಫೋನ್ ಮಾಡಿ ಮಾತನಾಡಿದಾಗ ಎದುರುದಾರರು ಫಾರಂ ನಂ.21ನೇದ್ದನ್ನು ಶಿಫಾರಸ್ಸು ಮಾಡಲು ಫೀಜಿನ ನೆಪದಲ್ಲಿ 5,000/- ರೂ.ಗಳನ್ನು ನೀಡಬೇಕೆಂದು ದೂರುದಾರರನ್ನು ಒತ್ತಾಯಿಸಿರುತ್ತಾರೆ. ಈ ಸಂಭಾಷಣೆಯನ್ನು ದೂರುದಾರರು ಅವರ ಮೊಬೈಲ್‌ನಲ್ಲಿ ಧ್ವನಿ ಮುದ್ರಿಸಿಕೊಂಡಿರುತ್ತಾರೆ. ದೂರುದಾರರಿಗೆ ಸರ್ಕಾರಿ ಕೆಲಸಕ್ಕೆ ಲಂಚದ ಹಣ ಕೊಡಲು ಇಷ್ಟವಿಲ್ಲದಿದ್ದರೂ ಸಹ 2,000/- ರೂ.ಗಳನ್ನು ಕೊಡುವುದಾಗಿ ಚೌಕಾಸಿ ಮಾಡಿದ್ದು, ಎದುರುದಾರರು ಒಪ್ಪದ ಕಾರಣ ಅವರ ಬೇಡಿಕೆಯಂತೆ 5,000/- ರೂ. ಲಂಚದ ಹಣವನ್ನು ದಿ.17/04/2017ರಂದು ಕೊಡುವುದಾಗಿ ಒಪ್ಪಿರುತ್ತಾರೆ. ದೂರುದಾರರಿಗೆ ಎದುರುದಾರರು ಲಂಚದ ಹಣ ನೀಡಲು ಬೇಡಿಕೆ ಇಟ್ಟು ಮಾತನಾಡಿದ ಸಂಭಾಷಣೆಯನ್ನು ತಮ್ಮ ಮೊಬೈಲ್‌ನಲ್ಲಿ ಧ್ವನಿ ಮುದ್ರಿಸಿಕೊಂಡಿರುತ್ತಾರೆ ಹಾಗೂ ಸಿ.ಡಿಯಲ್ಲಿ ಡೌನ್ ಲೋಡ್ ಮಾಡಿಕೊಂಡಿರುತ್ತಾರೆ.

ii. ದಿ:17/04/2017 ರಂದು ಬೆಳಿಗ್ಗೆ 11:45 ಗಂಟೆಗೆ ದೂರುದಾರರು ತನಗೆ ಲಂಚದ ಹಣ ಕೊಡಲು ಇಷ್ಟವಿಲ್ಲದೆ ಇದ್ದುದರಿಂದ ತನಿಖಾಧಿಕಾರಿಗಳನ್ನು ಭೇಟಿಮಾಡಿ ದೂರು ನೀಡಿದ್ದು, ಅದರ ಆಧಾರದ ಮೇಲೆ ಬಳ್ಳಾರಿ ಎಸಿಬಿ ಪೋಲಿಸ್ ಠಾಣೆ ಮೊ. ಸಂ. 04/2017 ರಲ್ಲಿ ಕಲಂ 7, 13(1) (ಡಿ) ಸಹ ಕಲಂ 13(2) ಭ್ರಷ್ಟಾಚಾರ ನಿಗ್ರಹ ಕಾಯ್ದೆ (ತಿದ್ದುಪಡಿ) 1988 ರ ಅಡಿ ಪ್ರಕರಣ ದಾಖಲಿಸಿರುತ್ತಾರೆ.

iii. ಪ್ರಕರಣ ದಾಖಲಾದ ನಂತರ ಅದೇ ದಿನ ಅಂದರೆ ದಿ:17/04/2017 ರಂದು ತನಿಖಾಧಿಕಾರಿಗಳು ಸರ್ಕಾರಿ ಪಂಚರುಗಳಾದ 1) ಶ್ರೀ. ಎಂ.ಎ. ಆಸೀಫ್, 2) ಶ್ರೀ ಎಂ. ಹುಚ್ಚೀರಪ್ಪ, (ನೆರಳು ಸಾಕ್ಷಿ), ಇವರುಗಳನ್ನು ಬರಮಾಡಿಕೊಂಡಿದ್ದು, ಸದರಿಯವರ ಸಮಕ್ಷಮ ದೂರುದಾರರು ಒಂದು ಮೊಬೈಲ್‌ನ್ನು ಹಾಜರುಪಡಿಸಿದ್ದು, ತನಿಖಾಧಿಕಾರಿಗಳು ದೂರುದಾರರು ಹಾಜರುಪಡಿಸಿದ್ದ ಮೊಬೈಲ್‌ನ್ನು ಲ್ಯಾಪ್ ಟಾಪ್‌ನಲ್ಲಿ ಪ್ಲೇ ಮಾಡಿ, ಸದರಿ ಸಂಭಾಷಣೆಯನ್ನು ಪಂಚರಿಗೆ ಕೇಳಿಸಲಾಗಿ, ಎದುರುದಾರರು ಲಂಚದ ಹಣಕ್ಕೆ ಬೇಡಿಕೆ ಇಟ್ಟಿರುವುದು ಕಂಡು ಬರುತ್ತದೆ. ಲಂಚ ನೀಡಲು ತಂದ (ರೂ. 2,000/- ಮುಖಬೆಲೆಯ 02-ನೋಟುಗಳು ಮತ್ತು ರೂ.500/- ಮುಖಬೆಲೆಯ 2-ನೋಟುಗಳು) ಒಟ್ಟು 5,000/- ರೂ.ಗಳನ್ನು ದೂರುದಾರರು ತನಿಖಾಧಿಕಾರಿಗಳ ಮುಂದೆ ಹಾಜರು ಪಡಿಸಿದ್ದು, ಸದರಿ ನೋಟುಗಳನ್ನು ತನಿಖಾಧಿಕಾರಿಗಳು ಪಂಚ ಸಾಕ್ಷಿ-2ರವರ ಮೂಲಕ ನಂ. ಮತ್ತು ಮೌಲ್ಯವನ್ನು ಪರಿಶೀಲಿಸಿರುತ್ತಾರೆ. ನಂತರ ಪಂಚ-1 ಎಂ.ಎ. ಆಸೀಫ್‌ರವರು ಪ್ರತ್ಯೇಕ ಹಾಳೆಯಲ್ಲಿ ಬರೆಯಿಸಿರುತ್ತಾರೆ. ಪೋಲೀಸ್ ಸಿಬ್ಬಂದಿ ಸದರಿ ನೋಟುಗಳಿಗೆ ಫಿನಾಪ್ತಲೀನ್ ಪೌಡರನ್ನು ಸವರಿ, ಸದರಿ ಹಣವನ್ನು ಪಂಚ ಸಾಕ್ಷಿ-1 ಎಂ. ಎ. ಆಸೀಫ್

ರವರ ಕೈಗೆ ಕೊಟ್ಟಿದ್ದು, ಸದರಿಯವರು ಸದರಿ ನೋಟುಗಳನ್ನು ಎಣಿಸಿ ಅವುಗಳ ನಂ. ಮತ್ತು ಮೌಲ್ಯವನ್ನು ತಾಳೆ ಮಾಡಿ ಖಾತ್ರಿ ಪಡಿಸಿಕೊಂಡಿರುತ್ತಾರೆ ಹಾಗೂ ಫಿನಾಫ್ತಲೀನ್ ಲೇಪಿತ ಹಣವನ್ನು ದೂರುದಾರರು ಧರಿಸಿದ್ದ ಶರ್ಟಿನ ಎದೆಯ ಮೇಲಿನ ಎಡಭಾಗದ ಜೇಬಿನಲ್ಲಿ ಇಟ್ಟಿರುತ್ತಾರೆ. ನಂತರ ತನಿಖಾಧಿಕಾರಿಗಳು ಪಂಚ ಆಸಿಫ್ ರವರ ಎರಡೂ ಕೈಗಳನ್ನು ಸೋಡಿಯಮ್ ಕಾರ್ಬೋನೇಟ್ ದ್ರಾವಣದಲ್ಲಿ ತೊಳೆಸಲಾಗಿ, ದ್ರಾವಣವು ಗುಲಾಬಿ ಬಣ್ಣಕ್ಕೆ ತಿರುಗಿದ್ದು, ಫಿನಾಫ್ತಲೀನ್ ಪೌಡರನ ವೈಶಿಷ್ಟತೆಯನ್ನು ದೂರುದಾರರು ಹಾಗೂ ಪಂಚರಿಗೆ ಮನವರಿಕೆ ಮಾಡಿಕೊಟ್ಟಿರುತ್ತಾರೆ. ನೆರಳು ಸಾಕ್ಷಿಯಾದ ಎಂ. ಹುಚ್ಚೀರಪ್ಪರವರಿಗೆ ದೂರುದಾರರೊಂದಿಗೆ ಹೋಗಿ ಲಂಚವನ್ನು ನೀಡುವ ಕಾಲಕ್ಕೆ ನಡೆಯುವ ಸಂಭಾಷಣೆ ಹಾಗೂ ವಿದ್ಯಾಮಾನಗಳನ್ನು ಗಮನಿಸಿ, ವರದಿ ಮಾಡಬೇಕೆಂದು ಸೂಚನೆ ನೀಡಿರುತ್ತಾರೆ. ದೂರುದಾರರಿಗೆ ಹಣವನ್ನು ಅನಗತ್ಯವಾಗಿ ಮುಟ್ಟದಂತೆ, ಬೇರೆ ಯಾವುದಕ್ಕೂ ಬಳಸದಂತೆ ತಿಳಿಸಿ, ಎದುರುದಾರರು ಲಂಚದ ಹಣವನ್ನು ಕೇಳಿದಾಗ ಮಾತ್ರ ಕೊಡುವಂತೆ ಮತ್ತು ಲಂಚದ ಹಣವನ್ನು ಸ್ವೀಕರಿಸಿದ ನಂತರ ಹೊರಗಡೆ ಬಂದು ನಿಮ್ಮ ಎರಡೂ ಕೈಗಳಿಂದ ತಲೆ ಕೂದಲನ್ನು ಸವರಿಕೊಳ್ಳುವ ಮೂಲಕ ಸನ್ನೆ ಮಾಡಬೇಕೆಂದು ತಿಳಿಸಿರುತ್ತಾರೆ. ಆ ಕಾಲಕ್ಕೆ ನಡೆಯುವ ಸಂಭಾಷಣೆಯನ್ನು ದೂರುದಾರರಿಗೆ ಅವರ ಮೊಬೈಲ್‌ನಲ್ಲೇ ರೆಕಾರ್ಡ್ ಮಾಡಿಕೊಳ್ಳಲು ತನಿಖಾಧಿಕಾರಿಗಳು ತಿಳಿಸಿರುತ್ತಾರೆ. ತನಿಖಾಧಿಕಾರಿಗಳು ದೂರುದಾರರು ಹಾಜರುಪಡಿಸಿದ್ದ ಮೊಬೈಲ್‌ನ್ನು ಲ್ಯಾಪ್ ಟಾಪ್‌ಗೆ ಅಳವಡಿಸಿ ಅದರಲ್ಲಿಯ ಸಂಭಾಷಣೆಯನ್ನು ಸಿಡಿಗಳಿಗೆ ವರ್ಗಾಯಿಸಿರುತ್ತಾರೆ. ಈ ಎಲ್ಲಾ ಘಟನಾವಳಿಗಳನ್ನು ದಿ.17.04.2017ರಂದು ಬೆಳಿಗ್ಗೆ 11-45 ಗಂಟೆಯಿಂದ ಮಧ್ಯಾಹ್ನ 03-30 ಗಂಟೆಯವರೆಗೆ ಬಳ್ಳಾರಿ ಎಸಿಬಿ ಕಚೇರಿಯಲ್ಲಿ ಪ್ರಾಯೋಗಿಕ ಪಂಚನಾಮೆಯನ್ನು ತನಿಖಾಧಿಕಾರಿಗಳು ತಮ್ಮ ಸಿಬ್ಬಂದಿಗೆ ಉಕ್ತಲೇಖನ ನೀಡಿ, ಲ್ಯಾಪ್‌ಟಾಪ್‌ನಲ್ಲಿ ಬೆರಳಚ್ಚು ಮಾಡಿಸಿರುತ್ತಾರೆ.

iv. ನಂತರ ಅದೇ ದಿನ ಅಂದರೆ ದಿ:17/04/2017 ರಂದು ಮಧ್ಯಾಹ್ನ 3-45 ಗಂಟೆಗೆ ದೂರುದಾರರು ಎದುರುದಾರರು ಕೆಲಸ ಮಾಡುತ್ತಿರುವ ಹಗರಿಬೊಮ್ಮನಹಳ್ಳಿ ತಾಲ್ಲೂಕು ಕಚೇರಿಯ ಬಳಿ ಬಂದು, ಎದುರುದಾರರ ಮೊಬೈಲ್‌ಗೆ ಕರೆ ಮಾಡಿದಾಗ, ಅವರು ಹಗರಿಬೊಮ್ಮನಹಳ್ಳಿಯ 6ನೇ ವಾರ್ಡ್, ರಾಮನಗರದಲ್ಲಿರುವ ಅವರ ಮನೆಗೆ ಬರುವಂತೆ ತಿಳಿಸಿರುತ್ತಾರೆ. ಅದರಂತೆ ದೂರುದಾರರು ಮತ್ತು ಪಂಚ ಸಾಕ್ಷಿ-ಎಮ್. ಹುಚ್ಚೀರಪ್ಪ ರವರೊಂದಿಗೆ ಎದುರುದಾರರ ಮನೆಯ ಕಾಂಪೌಂಡ್ ಒಳಗಡೆ ಬಂದು ಖಾತೆ ಬದಲಾವಣೆ ಬಗ್ಗೆ ಎದುರುದಾರರ ಹತ್ತಿರ ಮಾತನಾಡಿದಾಗ, ಎದುರುದಾರರು 5,000/- ರೂ.ಗಳ ಲಂಚದ ಹಣಕ್ಕೆ ಬೇಡಿಕೆ ಇಟ್ಟಿದ್ದು, ಅದರಂತೆ ದೂರುದಾರರು ಶರ್ಟಿನ ಎಡಜೇಬಿನಿಂದ ಹಣವನ್ನು ತೆಗೆದು ಎದುರುದಾರರ ಕೈಗೆ ಕೊಡಲು ಹೋದಾಗ, ಅವರು ಲಂಚದ ಹಣವನ್ನು ಕೈಯಿಂದ ಸ್ವೀಕರಿಸದೆ ಮನೆಯ ವರಾಂಡದಲ್ಲಿರುವ ಕಟ್ಟಿಗೆಯ ಟೇಬಲ್ ಮೇಲೆ ಇಟ್ಟು ಹೋಗುವಂತೆ ಸನ್ನೆ ಮಾಡಿರುತ್ತಾರೆ. ಅದರಂತೆ ದೂರುದಾರರು ಲಂಚದ ಹಣವನ್ನು ಎದುರುದಾರರು ಹೇಳಿದ ಟೇಬಲ್ ಮೇಲೆ ವಿಜಯವಾಣಿ ಪೇಪರು ಇದ್ದು, ಅದರ ಮೇಲೆ ಲಂಚದ ಹಣವನ್ನು ಇಟ್ಟಿದ್ದು, ನಂತರ ಎದುರುದಾರರು ಆ ಹಣವನ್ನು ಮುಟ್ಟಿ, ಸೆಲ್ಲೋಫಿನ್ ಟೇಪ್ ಕಟ್ ಮಾಡುವ ಪ್ಲಾಸ್ಟಿಕ್

ಡಬ್ಬಿಯನ್ನು ಹಣವು ಕಾಣದಂತೆ ಮುಚ್ಚಿರುತ್ತಾರೆ. ನಂತರ ತನಿಖಾಧಿಕಾರಿಗಳು ಸಿಬ್ಬಂದಿ ಸಹಾಯದಿಂದ ಪೇಪರ್ ಮೇಲೆ ಹಾಗೂ ಪ್ಲಾಸ್ಟಿಕ್ ಡಬ್ಬಿಯನ್ನು ಹತ್ತಿಯಿಂದ ಒರೆಸಿ, ಅದನ್ನು ಸೋಡಿಯಮ್ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿಸಿ ತೆಗೆದಾಗ, ಆ ದ್ರಾವಣವು ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ. ಸದರಿ ಹತ್ತಿಯನ್ನು, ಹಣವನ್ನು ತನಿಖಾಧಿಕಾರಿಗಳು ಅಮಾನತ್ತು ಪಡಿಸಿಕೊಂಡಿರುತ್ತಾರೆ.

v. ನಂತರ ತನಿಖಾಧಿಕಾರಿಗಳು ಪಂಚನಾಮೆ ಕಾಲಕ್ಕೆ ದೂರುದಾರರ ಬಳಿ ಇದ್ದ ಮೊಬೈಲ್‌ನಲ್ಲಿ ವಾಯ್ಸ್ ರೆಕಾರ್ಡ್‌ನ್ನು ಹಾಜರುಪಡಿಸಿದ್ದು, ಅದರಲ್ಲಿ ಎದುರುದಾರರು ಲಂಚದ ಹಣಕ್ಕೆ ಬೇಡಿಕೆ ಇಟ್ಟ ಸಂಭಾಷಣೆಗಳನ್ನು ಮೊಬೈಲ್‌ನಿಂದ ಲ್ಯಾಪ್‌ಟಾಪ್‌ಗೆ ಕಾಪಿ ಮಾಡಿಕೊಂಡು ಅದನ್ನು ಸಿಡಿಗೆ ವರ್ಗಾಯಿಸಿ ಸಿಡಿಗಳನ್ನು ತಯಾರಿಸಿರುತ್ತಾರೆ. ನಂತರ ತನಿಖಾಧಿಕಾರಿಗಳು ಎದುರುದಾರರಿಗೆ ದೂರುದಾರರಿಗೆ ಸಂಬಂಧಪಟ್ಟ ಕಡತವನ್ನು ಹಾಜರುಪಡಿಸಲು ತಿಳಿಸಿದ್ದು, ಅವರು ತನ್ನ ಬಳಿ ಸದರಿ ಕಡತವು ಇಲ್ಲವೆಂದು ಮತ್ತು ಈಗಾಗಲೇ ಸದರಿ ಕಡತದ ಕೆಲಸವನ್ನು ಮುಗಿಸಿ, ಅವರ ಕಚೇರಿಯ ರೆಕಾರ್ಡ್ ರೂಮ್‌ಗೆ ಹಸ್ತಾಂತರಿಸಿರುವುದಾಗಿ ತಿಳಿಸಿರುತ್ತಾರೆ. ಈಗಾಗಲೇ ಮಧ್ಯರಾತ್ರಿಯಾಗಿದ್ದರಿಂದ ನಂತರ ಹಗರಿಬೊಮ್ಮನಹಳ್ಳಿ ತಾಲ್ಲೂಕು ಕಚೇರಿಗೆ ಹೋಗಿ ಪರಿಶೀಲಿಸಲಾಗುವುದು ಎಂದು ತನಿಖಾಧಿಕಾರಿಗಳು ತಿಳಿಸಿರುತ್ತಾರೆ.

vi. ತನಿಖಾಧಿಕಾರಿಗಳು ಎದುರುದಾರರಿಗೆ ದೂರುದಾರರಿಂದ ಪಡೆದ ಲಂಚದ ಹಣದ ಬಗ್ಗೆ ವಿವರಣೆಯನ್ನು ನೀಡುವಂತೆ ಸೂಚಿಸಿದಾಗ, ಎದುರುದಾರರು ತಮ್ಮ ಸಮಜಾಯಿಷಿಯನ್ನು ನೀಡಿದ್ದು, ಅದರಲ್ಲಿ "ಹಗರಿಬೊಮ್ಮನಹಳ್ಳಿ ತಾಲ್ಲೂಕು ಉಪ್ಪನಾಯಕನ ಹಳ್ಳಿ ನಿವಾಸಿಯಾದ ಪಂಪಾಪತಿ ತಂದೆ ಹುಣಸಿ ಮರದ ಅಂಬಣ್ಣ ಇವರು ದಿನಾಂಕ: 17/04/2017ರಂದು ಸಾಯಂಕಾಲ ಸುಮಾರು 06-30 ಪಿ.ಎಂ. ಸಮಯದಲ್ಲಿ ಮೊಬೈಲ್ ಮುಖಾಂತರ ಫೋನ್ ಮಾಡಿ ಸಾರ್, ತಾಲ್ಲೂಕು ಕಚೇರಿ ಹತ್ತಿರ ಇರುತ್ತೇನೆ ಬನ್ನಿ ಎಂದು ಫೋನ್ ಮಾಡಿರುತ್ತಾರೆ. ಆಗ ನಾನು ಬೇರೆ ಕಡೆ ಇರುತ್ತೇನೆ ಎಂದು ಹೇಳಿ ಮನೆ ಹತ್ತಿರ ಇರುವುದಿಲ್ಲ ಎಂದು ಹೇಳಿರುತ್ತೇನೆ. ನಾವುಗಳು ನಿಮ್ಮ ಮನೆ ನೋಡಿರುವುದಿಲ್ಲ ಎಲ್ಲಿಗೆ ಬರಲಿ ಎಂದು ಕೇಳಿದಾಗ ಕೂಡ್ಲಿಗಿ ಸರ್ಕಲ್ ಹತ್ತಿರ ನಮ್ಮ ಮನೆ ಇದೆ ಎಂದು ಹೇಳಿರುತ್ತೇನೆ. ನಂತರ ಪಂಪಾಪತಿಯವರು ಒಂದು ಕಂದಾಯ ರಸೀದಿಯನ್ನು ಹಾಕಲು ಹಣವನ್ನು ಕೊಡಲು ಬಂದಾಗ, ನಾನು ನಾಳೆ ಎಂದು ಹೇಳಿ ಮನೆಯೊಳಗೆ ಬರುತ್ತೇನೆ. ತದನಂತರ ಒಬ್ಬ ವ್ಯಕ್ತಿ ವಿಳಾಸವನ್ನು ಕೇಳುತ್ತಾ ಒಂದೇ ಸಾರಿಗೆ ನನ್ನನ್ನು ತಬ್ಬಿ ಹಿಡಿದುಕೊಂಡರು. ಏಕೆ ಎಂದು ವಿಚಾರ ಮಾಡಲಾಗಿ ಪಂಪಾಪತಿರವರು ನಿಮ್ಮ ಮೇಲೆ ದೂರನ್ನು ಸಲ್ಲಿಸಿರುತ್ತಾರೆ ಅಂತಾ ತಿಳಿಸಿದರು. ಉದ್ದೇಶಪೂರ್ವಕವಾಗಿ ಮೇಲ್ಕಂಡ ವ್ಯಕ್ತಿಯಾದ ಪಂಪಾಪತಿಯವರು ಈ ಪ್ರಕರಣದಲ್ಲಿ ನನ್ನನ್ನು ಸಿಲುಕಿಸಿರುತ್ತಾರೆ" ಎಂದು ಸಮಜಾಯಿಷಿಯನ್ನು ನೀಡಿರುತ್ತಾರೆ. ಈ ಎಲ್ಲಾ ಘಟನಾವಳಿಗಳನ್ನು ವಿವಿಧ ಹಂತಗಳಲ್ಲಿ ಫೋಟೋ ತೆಗೆಯಿಸಿ, ದಿನಾಂಕ: 17/04/2017ರಂದು ರಾತ್ರಿ 07-30 ಗಂಟೆಯಿಂದ 11-00 ಗಂಟೆಯವರೆಗೆ ಎದುರುದಾರರವರ ಮನೆಯಲ್ಲಿ ತನಿಖಾಧಿಕಾರಿಗಳು ಉಕ್ತಲೇಖನ ನೀಡಿ, ತಮ್ಮ

ಸಿಬ್ಬಂದಿಯಿಂದ ಕಂಪ್ಯೂಟರ್‌ನಲ್ಲಿ ಟ್ರ್ಯಾಪ್ ಮಹಜರ್‌ನ್ನು ಬೆರಳಚ್ಚು ಮಾಡಿಸಿರುತ್ತಾರೆ. ನಂತರ ತನಿಖಾಧಿಕಾರಿಗಳು ಲಂಚದ ಹಣವನ್ನು ಜಫ್ತು ಮಾಡಿಕೊಂಡು ಪಂಚರ ಸಮಕ್ಷಮ ಪಂಚನಾಮೆ ಜರುಗಿಸಿರುತ್ತಾರೆ ಹಾಗೂ ಎದುರುದಾರರನ್ನು ಅದೇ ಕಾರಣಕ್ಕಾಗಿ ದಸ್ತಗಿರಿ ಮಾಡಿರುತ್ತಾರೆ.

vii. ನಂತರ ತನಿಖಾಧಿಕಾರಿಗಳು ದಿನಾಂಕ:18/04/2017ರಂದು ಬೆಳಿಗ್ಗೆ ಮಾದರಿ ಧ್ವನಿ ಸಂಗ್ರಹಿಸುವ ಅವಶ್ಯಕತೆಯಿದ್ದು, ಟ್ರ್ಯಾಪ್ ಪೂರ್ವದಲ್ಲಿ ಮತ್ತು ಟ್ರ್ಯಾಪ್ ಸಮಯದಲ್ಲಿ ನಡೆಸಿದ ಸಂಭಾಷಣೆಗಳನ್ನು ಓದಲು ಪ್ರತಿಲೇಖವನ್ನು ತಯಾರಿಸಿದ್ದು, ಅದನ್ನು ಎದುರುದಾರರಿಂದ ಮೂರು ಮೂರು ಬಾರಿ ಓದಿಸಿ, ವಾಯ್ಸ್ ರೆಕಾರ್ಡ್‌ನಲ್ಲಿ ರೆಕಾರ್ಡ್ ಮಾಡಿಕೊಂಡಿದ್ದು, ಅದನ್ನು ಲ್ಯಾಪ್ ಟಾಪ್‌ಗೆ ಡೌನ್ ಲೋಡ್ ಮಾಡಿಕೊಂಡು ಪ್ರತ್ಯೇಕ ಸಿಡಿಗಳನ್ನು ತಯಾರಿಸಿರುತ್ತಾರೆ. ಈ ಬಗ್ಗೆ ತನಿಖಾಧಿಕಾರಿಗಳು ಪಂಚರ ಸಮಕ್ಷಮ ಪಂಚನಾಮೆಯನ್ನು ಬಳ್ಳಾರಿ ಎಸಿಬಿ ಠಾಣೆಯಲ್ಲಿ ಬೆಳಿಗ್ಗೆ 11-30 ಗಂಟೆಯಿಂದ ಮಧ್ಯಾಹ್ನ 02-30ಗಂಟೆಯವರೆಗೆ ತಮ್ಮ ಸಿಬ್ಬಂದಿಗೆ ಉಕ್ತಲೇಖನ ನೀಡಿ ಲ್ಯಾಪ್‌ಟಾಪ್‌ನಲ್ಲಿ ಬೆರಳಚ್ಚು ಮಾಡಿಸಿರುತ್ತಾರೆ.

viii. ಮುಂದುವರೆದು, ದಿನಾಂಕ: 22/04/2017ರಂದು ತನಿಖಾಧಿಕಾರಿಗಳು ಸರ್ಕಾರಿ ಪಂಚರುಗಳಾದ 1) ಶ್ರೀ. ಪಿ. ರಾಜಶೇಖರ ಲಮಾಣಿ, 2) ಶ್ರೀ ಟಿ.ಬಿ.ಎಸ್. ಶಾಂತಕುಮಾರ, ಇವರುಗಳನ್ನು ಬರಮಾಡಿಕೊಂಡಿದ್ದು, ಇವರ ಸಮಕ್ಷಮ ಎದುರುದಾರರ ಕಚೇರಿಯಲ್ಲಿ ಕೆಲಸ ನಿರ್ವಹಿಸುತ್ತಿರುವ ಶ್ರೀ. ಹೆಚ್. ಶಿವಪ್ಪ ಮತ್ತು ರಮೇಶ್ ಇವರಿಗೆ ಸಿಡಿಗಳಲ್ಲಿ ನಮೂದಾದ ಸಂಭಾಷಣೆಯನ್ನು ಲ್ಯಾಪ್‌ಟಾಪ್ ಮೂಲಕ ಕೇಳಿಸಿದ್ದು, ಅವರು ಸಿಡಿಗಳಲ್ಲಿಯ ಒಂದು ಧ್ವನಿಯನ್ನು ಎದುರುದಾರರ ಧ್ವನಿಯೆಂದು ಗುರುತಿಸಿರುತ್ತಾರೆ. ನಂತರ ತನಿಖಾಧಿಕಾರಿಗಳು ದೂರುದಾರರಿಗೆ ಸಂಬಂಧಪಟ್ಟ ಕಡತವನ್ನು ಹಾಜರುಪಡಿಸಲು ಕಚೇರಿಯ ಶಿರಸ್ತೇದಾರರಾದ ಕೆ.ಎಮ್. ಶಿವಕುಮಾರ್‌ರವರಿಗೆ ಕೇಳಿದಾಗ, ಕಡತವನ್ನು ಹುಡಕಲಾಗಿ, ಇರದೇ ಇದ್ದುದರಿಂದ ಎದುರುದಾರರು ತಮ್ಮ ಕಚೇರಿಗೆ ಕಡತವನ್ನು ಮುಂದಿನ ಕ್ರಮಕ್ಕಾಗಿ ಸಲ್ಲಿಸಿರುವುದಿಲ್ಲವೆಂದು ತಿಳಿಸಿ, ನಂತರ ಭೂಮಿ ಕೇಂದ್ರದ ಆಪರೇಟರ್‌ರವರಾದ ಶ್ರೀಮತಿ. ಮಂಜಮ್ಮ, ಗ್ರಾಮ ಲೆಕ್ಕಾಧಿಕಾರಿಗಳು, ಹಗರಿಬೊಮ್ಮನಹಳ್ಳಿ, ತಾಲ್ಲೂಕು ಕಚೇರಿರವರಿಂದ ಭೂಮಿ ತಂತ್ರಾಂಶದಿಂದ ಈಗಿನ ಕಡತದ ಸ್ಥಿತಿಗತಿಯನ್ನು ಪರಿಶೀಲಿಸಿ, ಅದರ ಪ್ರತಿಯನ್ನು ಪ್ರಿಂಟ್ ಹಾಕಿಸಿ, ಶಿರಸ್ತೇದಾರರಿಂದ ಧೃಡೀಕರಿಸಿಕೊಂಡು ಪಡೆದುಕೊಂಡಿರುತ್ತಾರೆ. ಶಿರಸ್ತೇದಾರರಾದ ಕೆ.ಎಮ್. ಶಿವಕುಮಾರ್‌ರವರು ಎದುರುದಾರರಿಗೆ 30-ದಿನಗಳ ಕಾಲಾವಕಾಶ ಇದ್ದು, ನಂತರದ ಕೆಲಸದ ದಿನದಂದು ಕಡತವನ್ನು ನಮ್ಮ ಕಚೇರಿಗೆ ಸಲ್ಲಿಸಬೇಕಾಗಿದ್ದು, ಆದರೆ ಎದುರುದಾರರು ಕಡತವನ್ನು ನಮ್ಮ ಕಚೇರಿಗೆ ಸಲ್ಲಿಸದೆ ತನ್ನ ಬಳಿಯಲ್ಲಿಯೇ ಇಟ್ಟುಕೊಂಡು ಇದುವರೆವಿಗೂ ಕಚೇರಿಗೆ ಸಲ್ಲಿಸಿರುವುದಿಲ್ಲ ಎಂದು ತಿಳಿಸಿರುತ್ತಾರೆ. ಈ ಬಗ್ಗೆ ತನಿಖಾಧಿಕಾರಿಗಳು ಪಂಚರ ಸಮಕ್ಷಮ ಪಂಚನಾಮೆಯನ್ನು ಹಗರಿಬೊಮ್ಮನಹಳ್ಳಿ ಪಟ್ಟಣದ ತಾಲ್ಲೂಕು ಕಚೇರಿಯಲ್ಲಿರುವ ಭೂಮಿ ಕೇಂದ್ರದಲ್ಲಿ ಮಧ್ಯಾಹ್ನ 12-45 ಗಂಟೆಯಿಂದ ಮಧ್ಯಾಹ್ನ

03–00 ಗಂಟೆಯವರೆಗೆ ತಮ್ಮ ಸಿಬ್ಬಂದಿಗೆ ಉಕ್ತಲೇಖನ ನೀಡಿ ಲ್ಯಾಪ್‌ಟಾಪ್‌ನಲ್ಲಿ ಬೆರಳಚ್ಚು ಮಾಡಿಸಿರುತ್ತಾರೆ.

ix. ಸಾಕ್ಷಿದಾರರ ಹೇಳಿಕೆಗಳು, ದೂರು ಅರ್ಜಿ, ತನಿಖಾಧಿಕಾರಿ ಸಂಗ್ರಹಿಸಿದ ದಾಖಲೆ, ಧ್ವನಿ ವಿಶ್ಲೇಷಣಾ ವರದಿ, ರಾಸಾಯನಿಕ ತಜ್ಞರ ವರದಿ, ಇವುಗಳನ್ನು ಪರಿಶೀಲಿಸಿದಾಗ, ಎದುರುದಾರರು ಸರ್ಕಾರಿ/ಸಾರ್ವಜನಿಕ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ಕರ್ತವ್ಯದಲ್ಲಿ ಸಂಪೂರ್ಣ ನಿಷ್ಠೆ ತೋರಿಸದೆ, ಭ್ರಷ್ಟಾಚಾರವೆಸಗಿ, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966 ರ ನಿಯಮ 3 (1) (i) ರಿಂದ (iii) ರನ್ವಯ ದುರ್ನಡತೆಯನ್ನು ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ.

x. ತನಿಖಾ ವರದಿಯ ವಿವರಗಳನ್ನು ಪರಿಶೀಲಿಸಲಾಗಿ, ಎದುರುದಾರರು ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ಕಲಂ 2(6)ರ ಪ್ರಕಾರ ಸರ್ಕಾರಿ ನೌಕರರಾಗಿದ್ದು, ಅದೇ ಅಧಿನಿಯಮದ 2(2)ರಂತೆ ಕರ್ತವ್ಯ ದುರುಪಯೋಗ ಪಡಿಸಿಕೊಂಡು ತಮ್ಮ ಸ್ವಲಾಭಕ್ಕಾಗಿ ಭ್ರಷ್ಟಾಚಾರ ಎಸಗಿ ಶಿಸ್ತು ಕ್ರಮಕ್ಕೆ ಒಳಪಡಿಸಲು ಅರ್ಹರಾಗಿರುವುದು ಕಂಡು ಬರುತ್ತದೆ.

2) ಮೇಲೆ ಹೇಳಿದ ಕಾರಣಕ್ಕಾಗಿ ಎದುರುದಾರರ ಮೇಲೆ ಶಿಸ್ತು ಕ್ರಮಕ್ಕಾಗಿ ಇಲಾಖಾ ವಿಚಾರಣೆ ನಡೆಸಲು ಸಂಬಂಧ ಪಟ್ಟ ಪ್ರಾಧಿಕಾರಕ್ಕೆ ಏಕೆ ಶಿಫಾರಸ್ಸು ಮಾಡಬಾರದು ಎನ್ನುವ ಬಗ್ಗೆ, ಎದುರುದಾರರಿಂದ ಕಾರಣ ಪಡೆಯಲು ಪರಿವೀಕ್ಷಣಾ ಟಿಪ್ಪಣಿಯನ್ನು ಎದುರುದಾರರಿಗೆ ಕಳುಹಿಸಲಾಗಿ, ಎದುರುದಾರರು ಪರಿವೀಕ್ಷಣಾ ಟಿಪ್ಪಣಿಗೆ ತಮ್ಮ ಉತ್ತರವನ್ನು ದಿನಾಂಕ: 06/09/2021 ರಂದು ಸಲ್ಲಿಸಿರುತ್ತಾರೆ. ಸದರಿ ಸಮಜಾಯಿಷಿಯನ್ನು ಪರಿಶೀಲಿಸಲಾಗಿ, ಎದುರುದಾರರು ಆಪಾದನೆಗಳನ್ನು ನಿರಾಕರಿಸಿರುವುದರ ಹೊರತಾಗಿ, ಆಪಾದನೆಗಳನ್ನು ಅಲ್ಲಗಳೆಯಲು ಯಾವುದೇ ಪೂರಕ ದಾಖಲಾತಿಗಳನ್ನು ಸಲ್ಲಿಸಿರುವುದಿಲ್ಲ. ಎದುರುದಾರರು ತಮ್ಮ ಸಮಜಾಯಿಷಿಯಲ್ಲಿ "ದೂರುದಾರರು ರೂ.5,000/–ಗಳ ಲಂಚದ ಹಣವನ್ನು ಯಾವ ಮೂಲದಿಂದ ಸಂಗ್ರಹಿಸಿರುತ್ತಾರೆ ಎಂಬುದನ್ನು ತಿಳಿಸಿರುವುದಿಲ್ಲ, ಸದರಿ ಮಾಹಿತಿಯನ್ನು ಅವರ ಮೇಲಾಧಿಕಾರಿಗಳ ಗಮನಕ್ಕೆ ತಂದಿರುವುದಿಲ್ಲ. ತನಿಖಾಧಿಕಾರಿಗಳು ಇಬ್ಬರು ಪಂಚಸಾಕ್ಷಿಗಳನ್ನು ಕರೆಸಿದ್ದು, ಅವರು ಗ್ರೂಪ್–ಸಿ ಸಿಬ್ಬಂದಿಗಳಾಗಿರುತ್ತಾರೆ ಮತ್ತು ತನಿಖಾಧಿಕಾರಿಗಳು ಹೇಳಿದಂತೆ ಕೇಳುವ ಸಾಕ್ಷಿದಾರರಾಗಿರುತ್ತಾರೆ. ಈ ಇಬ್ಬರೂ ಸಾಕ್ಷಿದಾರರು ಮಾರ್ಗಸೂಚಿಗಳನ್ವಯ ಸೀನಿಯರ್ ಗೆಜೆಟೆಡ್ ಅಧಿಕಾರಿಗಳು ಆಗಿರುವುದಿಲ್ಲ. ದಿನಾಂಕ: 15/04/2017ರಂದು ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿದ್ದಾರೆನ್ನಲಾದ ಸಂಭಾಷಣೆಯಲ್ಲಿ ನಾನು ದೂರುದಾರರಿಂದ ಲಂಚದ ಹಣವನ್ನು ಕೇಳಿದ್ದೇನೆಂಬುದು ಸತ್ಯಕ್ಕೆ ದೂರವಾಗಿರುತ್ತದೆ. ದಿ:17/04/29017ರಂದು ಎಸಿಬಿ ಅಧಿಕಾರಿಗಳು ನನ್ನ ಎರಡೂ ಕೈಗಳನ್ನು ತೊಳೆಸಿದಾಗ ತಿಳಿಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ ಎಂದು ಸುಳ್ಳು ಮಾಹಿತಿಯನ್ನು ನಮೂದು ಮಾಡಿರುತ್ತಾರೆ. ನಾನು ದೂರುದರರಿಂದ ಯಾವುದೇ ಹಣವನ್ನು ಸ್ವೀಕರಿಸಿರುವುದಿಲ್ಲ ಹಾಗೂ ಹಣವನ್ನು ಟೇಬಲ್ ಮೇಲೆ ಇಡಲು ಸಹಾ ಸೂಚನೆಯನ್ನು ನೀಡಿರುವುದಿಲ್ಲ. ಎಸಿಬಿ ಅಧಿಕಾರಿಗಳು ಯಾವುದೇ ಪ್ರಾಥಮಿಕ ತನಿಖೆಯನ್ನು ನಡೆಸದೆ ನನ್ನ ವಿರುದ್ಧ ಸುಳ್ಳು ಪ್ರಕರಣ ದಾಖಲು ಮಾಡಿರುತ್ತಾರೆ. ತನಿಖಾಧಿಕಾರಿಗಳು ಮತ್ತು ಪೋಲೀಸ್ ಮುಖ್ಯ ಪೇದೆ ತಿಮ್ಮಾರೆಡ್ಡಿ ಉದ್ದೇಶಪೂರ್ವಕವಾಗಿ ಟ್ರ್ಯಾಪ್ ನಡೆಯುವ ಸ್ಥಳಕ್ಕೆ ಹೋಗಿರುವುದು ಮಾರ್ಗಸೂಚಿಗಳ ಸಂಪೂರ್ಣ ಉಲ್ಲಂಘನೆಯಾಗಿರುತ್ತದೆ. ದೂರುದಾರರನ್ನು ಹೊರತುಪಡಿಸಿ ಯಾವುದೇ ಪ್ರತ್ಯಕ್ಷ ಸಾಕ್ಷಿದಾರರು ಇಲ್ಲದೇ ಇದ್ದರೂ ಸಹ

ಸಾಕ್ಷಿದಾರರು ನನ್ನ ವಿರುದ್ಧ ಸುಳ್ಳು ಸಾಕ್ಷಿ ನುಡಿದಿರುತ್ತಾರೆ. ಈ ಎಲ್ಲಾ ಅಂಶಗಳಿಂದ ನಾನು ದೂರುದಾರರಿಂದ ಯಾವುದೇ ಲಂಚದ ಹಣವನ್ನು ಪಡೆದಿರುವುದಿಲ್ಲವೆಂದು ಸ್ಪಷ್ಟವಾಗಿ ಕಂಡು ಬರುತ್ತಿದ್ದು, ನಾನು ಸಲ್ಲಿಸಿರುವ ಉತ್ತರ ಹಾಗೂ ದಾಖಲೆಗಳನ್ನು ಪರಿಶೀಲಿಸಿ, ಇಲಾಖಾ ವಿಚಾರಣೆಯನ್ನು ಜರುಗಿಸಬಾರದು" ಎಂದು ಮುಂತಾಗಿ ಸಮಜಾಯಿಷಿಯನ್ನು ನೀಡಿರುತ್ತಾರೆ.

3) ಎದುರುದಾರರು ಸಲ್ಲಿಸಿರುವ ಸಮಜಾಯಿಷಿಯನ್ನು ತನಿಖಾ ಕಾಲದಲ್ಲಿ ಸಂಗ್ರಹಿಸಲಾದ, ದಾಖಲಾತಿಗಳು ಮತ್ತು ಹೇಳಿಕೆಗಳೊಂದಿಗೆ ಪರಿಶೀಲಿಸಲಾಗಿದ್ದು, ಎದುರುದಾರರು ದೂರುದಾರರಿಂದ ಲಂಚದ ಹಣವನ್ನು ಕೇಳಿ ಪಡೆದುಕೊಂಡಿರುವುದು ಕಂಡುಬರುತ್ತದೆ. ಎದುರುದಾರರು ನೀಡಿರುವ ಉತ್ತರದಲ್ಲಿ ಅವರ ವಿರುದ್ಧದ ನಡವಳಿಯನ್ನು ಕೈಬಿಡಲು ಸೂಕ್ತ/ಸಮಂಜಸ/ಸಮಾಧಾನಕರ ಕಾರಣ ತೋರಿಸಿಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿದೆ.

4) ಕಡತದಲ್ಲಿಯ ಸಂಗತಿಗಳು ಹಾಗೂ ದಾಖಲಾತಿಗಳಿಂದ, ಎದುರುದಾರರು ಫಿರ್ಯಾದುದಾರರಿಂದ ಲಂಚದ ಹಣವನ್ನು ಪಡೆದುಕೊಂಡಿದ್ದು, ತನ್ಮೂಲಕ ಎದುರುದಾರರು ಸರ್ಕಾರಿ/ಸಾರ್ವಜನಿಕ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ ಸಂಪೂರ್ಣ ಕರ್ತವ್ಯ ನಿಷ್ಠೆ ಮತ್ತು ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡ ದುರ್ವರ್ತನೆ/ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.

5) ಅದಲ್ಲದೆ ಎದುರುದಾರರು ಸರ್ಕಾರಿ ನೌಕರರಾಗಿದ್ದು, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ, 1966ರ ನಿಯಮ 3(1) ರ ಅಡಿಯಲ್ಲಿ ದುರ್ವತನೆ/ದುರ್ನಡತೆ ಕಂಡುಬರುವುದರಿಂದ, ಸದರಿಯವರ ವಿರುದ್ಧ ಇಲಾಖಾ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ಕಲಂ 12(3) ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ ಈ ವರದಿ ಮೂಲಕ ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ ಹಾಗೂ ಎದುರುದಾರರ ವಿರುದ್ಧದ ಇಲಾಖಾ ವಿಚಾರಣೆ ಮಾಡಲು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 14(ಎ)ರಡಿ ಈ ಸಂಸ್ಥೆಗೆ ವಹಿಸಬೇಕೆಂದು ಕೋರಿದೆ.

6) ಹಾಗೆಯೇ ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ಕಲಂ 12(4) ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ **ಮೂರು ತಿಂಗಳೊಳಗೆ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

28/12/21

**(ನ್ಯಾಯಮೂರ್ತಿ ಬಿ.ಎಸ್. ಪಾಟೀಲ್)**
**ಉಪಲೋಕಾಯುಕ್ತರು-2**
**ಕರ್ನಾಟಕ ರಾಜ್ಯ, ಬೆಂಗಳೂರು.**